## ಕಲಿಕಾ ಖಾತ್ರಿ ಕಾರ್ಯಕ್ರಮ

**ಕಾರ್ಯಕ್ರಮದ ಪರಿಕಲ್ಪನೆ :**

ಕಲಿಕಾ ಖಾತ್ರಿ ಕಾರ್ಯಕ್ರಮವನ್ನು ಸಾಕಾರಗೊಳಿಸುವುದರ ಜೊತೆಗೆ ಯಶಸ್ವಿಯಾಗಿ ನಿಭಾಯಿಸುತ್ತಿರುವ ಶಾಲೆಗಳನ್ನು ಗುರುತಿಸುವುದು. ಇದರ ಫಲವಾಗಿ ಸಮುದಾಯದ ಸಹಭಾಗಿತ್ವದಿಂದ ಹೆಚ್ಚು ಶಾಲೆಗಳು ಮತ್ತು ಶಿಕ್ಷಕರು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ಸಫಲಗೊಳಿಸಲು ಶ್ರಮಿಸುವಂತೆ ಪ್ರೇರೇಪಿಸುವುದು.

**ಕಲಿಕಾ ಖಾತ್ರಿ ಕಾರ್ಯಕ್ರಮ – ಏನು ?**

- ಜನವಸತಿ / ವಾರ್ಡ್‌ನಲ್ಲಿರುವ ಶಾಲಾ ವಯಸ್ಸಿನ ಮಕ್ಕಳೆಲ್ಲರು ಶಾಲೆಗೆ ದಾಖಲಾಗಬೇಕು.
- ದಾಖಲಾದವರೆಲ್ಲ ನಿರಂತರವಾಗಿ ಶಾಲೆಗೆ ಹಾಜರಾಗಬೇಕು.
- ಹಾಜರಾದ ಎಲ್ಲರಲ್ಲಿ ಅಪೇಕ್ಷಿತ ಗುಣಾತ್ಮಕ ಕಲಿಕೆ ಆಗಬೇಕು.
- ಈ ಗುರಿಯನ್ನು ಸಾಧಿಸಿದ ಶಾಲೆಗಳಿಗೆ ಪ್ರೋತ್ಸಾಹ ಧನ ನೀಡುವುದು.

**ಕಾರ್ಯಕ್ರಮದ ಉದ್ದೇಶಗಳು :**

- ಸಾರ್ವತ್ರಿಕ ದಾಖಲಾತಿ, ಹಾಜರಾತಿ ಮತ್ತು ಅಪೇಕ್ಷಿತ ಗುಣಾತ್ಮಕ ಕಲಿಕೆಯನ್ನು ಪ್ರಶಸ್ತಿ ನೀಡಿ ಗೌರವಿಸುವುದು.
- ಕಲಿಕಾ ಖಾತ್ರಿ ಕಾರ್ಯಕ್ರಮದ ಗುರಿ ಸಾಧಿಸುವಲ್ಲಿ ಶಾಲೆಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸೂಕ್ತವಾದ ಮಾರ್ಗಗಳನ್ನು ಹುಡುಕಿ, ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವುದು.
- ಕಲಿಕಾ ಖಾತ್ರಿ ಕಾರ್ಯಕ್ರಮ ಯಶಸ್ವಿಯಾದ ಶಾಲೆಗಳು ಅನುಸರಿಸಿದ ಕ್ರಮಗಳನ್ನು ಸಮುದಾಯ / ಶಿಕ್ಷಕರಿಗೆ ತಿಳಿಸುವುದರ ಜೊತೆಗೆ ಉಳಿದ ಶಾಲೆಗಳು ಕಲಿಕಾ ಖಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರೇರೇಪಿಸುವುದು.
- ಕಲಿಕಾ ಖಾತ್ರಿ ಕಾರ್ಯಕ್ರಮ ಯಶಸ್ಸು ಸಾಧಿಸಲು ಕಾರಣಗಳನ್ನು ತಿಳಿಯುವುದು ಅಂತೆಯೇ ಆ ಕಾರಣಗಳನ್ನು ವ್ಯಾಪಕಗೊಳಿಸಲು ಪ್ರಸ್ತುತವಿರುವ "ಶೈಕ್ಷಣಿಕ ನೀತಿಯ" ಮೇಲೆ ಪ್ರಭಾವ ಬೀರುವುದು.

**ಕಾರ್ಯಕ್ರಮದ ಪ್ರಾರಂಭಿಕ ಹಂತ :**

- ಕರ್ನಾಟಕ ಸರ್ಕಾರ ಹಾಗೂ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ ಈಶಾನ್ಯ ವಲಯದ 9280 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 2003–04ನೇ ಸಾಲಿನಲ್ಲಿ ಮೌಲ್ಯಮಾಪನ ನಡೆಸಿ ಪ್ರಯೋಗ ನಡೆಸಿರುತ್ತಾರೆ.
- ಈ ಪ್ರಯೋಗ ಕುರಿತು ಮೌಲ್ಯಮಾಪನವನ್ನು ಶಾರನ್ ಬಾರ್ನ್‌ಹಾರ್ಟ್ (Saron Barnhardt) ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯ, ಯು.ಎಸ್.ಎ., ನೆಟ್‌ವರ್ಕ್ ಆಫ್ ಎಂಟರ್ ಪ್ರೈಸಿಂಗ್ ಎಜುಕೇಷನಲ್ ವೆಂಚ್ಯುರ್ಸ್ ನ ಪ್ರೊ. ಜಲಾಲುದ್ದೀನ್ ಹಾಗೂ ದಿ ವರ್ಲ್ಡ್ ಬ್ಯಾಂಕ್ಸ್ ಡೆವಲಪ್‌ಮೆಂಟ್ ಎಕನಾಮಿಕ್ಸ್ ರಿಸರ್ಚ್ ಗ್ರೂಪ್ ಇವರು ನಡೆಸಿರುತ್ತಾರೆ.

## ಈಶಾನ್ಯ ವಲಯದ ಕಲಿಕಾ ಖಾತ್ರಿ ಕಾರ್ಯಕ್ರಮ (2003-05)

- 1903 ಸ.ಕಿ. ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು
- 46 ಶೈಕ್ಷಣಿಕ ಕ್ಷೇತ್ರಗಳು
- 3,80,000 ವಿದ್ಯಾರ್ಥಿಗಳು
- 584 ಮೌಲ್ಯಮಾಪಕರು

**ನಿಬಂಧನೆಗಳು** :

1. ಕನ್ನಡೇತರ ಮಾಧ್ಯಮಗಳ ಸರ್ಕಾರಿ ಶಾಲೆಗಳು ಈ ಯೋಜನೆಯಲ್ಲಿ ಭಾಗವಹಿಸಬಹುದಾಗಿದೆ.
2. ಮೊದಲು ಬಂದವರಿಗೆ ಮೊದಲ ಆಧ್ಯತೆಯ ಅನುಸಾರ ಈ ಕಾರ್ಯಕ್ರಮದಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ. ಒಂದು ಶೈಕ್ಷಣಿಕ ಕ್ಷೇತ್ರಕ್ಕೆ ಒಟ್ಟು 50 ಶಾಲೆಗಳಿಗೆ ಆದ್ಯತೆ ನೀಡಿದೆ.
3. ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಯ್ಕೆಯಾದ ಶಾಲೆಗಳ ಪಟ್ಟಿಯನ್ನು ಡಿ.ಎಸ್.ಇ.ಆರ್.ಟಿ./ ಉ.ನಿ./ ಗೆ ತಲುಪಿಸುವುದು.
4. ನೋಂದಾಯಿತ ಶಾಲೆಗಳ ಗುರಿ ಸಾಧನೆಯನ್ನು ಎ.ಪಿ.ಎಫ್. ಮತ್ತು ಕರ್ನಾಟಕ ಸರ್ಕಾರದ ಇಲಾಖೆ ಮೌಲ್ಯಮಾಪನ ತಂಡವು ನಂತರ ಸಾಧನೆಯನ್ನು ದೃಢಪಡಿಸಿಕೊಳ್ಳುವುದು.
5. ಅರ್ಜಿ ನಮೂನೆಯ ಸಂಗಡ ಲಗತ್ತಿಸಿರುವ ಶಾಲೆಯ ಅಗತ್ಯತೆಗಳ ಪಟ್ಟಿಯಲ್ಲಿ ನಮೂದಿಸಿರುವ ಆದ್ಯತೆಯ ಕಾರಣಗಳಿಗಾಗಿಯೇ ಪ್ರಶಸ್ತಿಯ ಮೊತ್ತವನ್ನು ಬಳಸುವುದು.
6. ಅರ್ಜಿ ನಮೂನೆಯ ಸಂಗಡ ಲಗತ್ತಿಸಿರುವ ಶಾಲೆಯ ಅಗತ್ಯತೆಗಳ ಪಟ್ಟಿಯಲ್ಲಿ ನಮೂದಿಸಿರುವ ಆದ್ಯತೆಯ ಕಾರಣಗಳಿಗಾಗಿಯೇ ಪ್ರಶಸ್ತಿಯ ಮೊತ್ತವನ್ನು ಬಳಸುವುದು.
7. ಅರ್ಜಿ ನಮೂನೆ ಭರ್ತಿಮಾಡುವುದು ಮತ್ತು ಅರ್ಜಿ ಸಲ್ಲಿಕೆಯ ನಂತರದ ಕ್ರಿಯೆ ಈ ಶೀರ್ಷಿಕೆಗಳಡಿಯಲ್ಲಿರುವ ಎಲ್ಲಾ ಮಾಹಿತಿಗಳು ಸಹ ನಿಬಂಧನೆಗೆ ಒಳಪಟ್ಟ ಅಂಶಗಳಾಗಿವೆ.

### 1. ದಾಖಲಾತಿ ಪರಿಶೀಲನೆ

- ಒಂದು ಜನವಸತಿ/ವಾರ್ಡ್‌ನಲ್ಲಿನ ಕುಟುಂಬ ಸಮೀಕ್ಷೆಯನ್ನು ಆಧರಿಸಿ (ನಮೂನೆ 3) ಆ ಪ್ರದೇಶದಲ್ಲಿನ ಶಾಲೆಗೆ ಸೇರಿಲ್ಲದ ಮತ್ತು ಶಾಲೆ ಬಿಟ್ಟ ಮಕ್ಕಳೆಲ್ಲರೂ ಶಾಲೆಗೆ ದಾಖಲಾಗಿರಬೇಕು.
- ಒಂದು ಶಾಲೆಯು ಒಂದಕ್ಕಿಂತ ಹೆಚ್ಚು ಜನವಸತಿ ಪ್ರದೇಶಗಳ ಕುಟುಂಬ ಸಮೀಕ್ಷೆ ಮಾಡಿದ್ದರೆ ಆ ಎಲ್ಲಾ ಜನವಸತಿಗಳ ಮಕ್ಕಳ ದಾಖಲೆಯ ಜವಾಬ್ದಾರಿಯು ಆ ಶಾಲೆಯದ್ದೇ ಆಗಿರುತ್ತದೆ.
- ಒಂದು ಜನವಸತಿ/ವಾರ್ಡ್‌ನಲ್ಲಿ ಒಂದಕ್ಕಿಂತ ಹೆಚ್ಚು ಸರ್ಕಾರಿ ಶಾಲೆಗಳಿದ್ದರೆ, ಕುಟುಂಬ ಸಮೀಕ್ಷೆಯಲ್ಲಿ ಗುರುತಿಸಿರುವ ಎಲ್ಲಾ ಮಕ್ಕಳ ದಾಖಲಾತಿಯು ಅಲ್ಲಿನ ಎಲ್ಲಾ ಶಾಲೆಗಳ ಜವಾಬ್ದಾರಿ.

## 2. ಹಾಜರಾತಿ ಪರಿಶೀಲನೆ :

- ❖ ವಿದ್ಯಾರ್ಥಿಯು ಶಾಲೆ ನಡೆದ ಒಟ್ಟು ದಿನಗಳಲ್ಲಿ ಶೇ 70ರಷ್ಟು ದಿನಗಳು ಶಾಲೆಗೆ ಹಾಜರಾಗಿರಬೇಕು. ಇದು ನಿರಂತರ ಹಾಜರಾತಿ.
- ❖ ದಾಖಲಾದ ಮಕ್ಕಳಲ್ಲಿ ಶೇ 90 ರಷ್ಟು ಮಕ್ಕಳು ನಿರಂತರವಾಗಿ ಹಾಜರಾದರೆ ಮಾತ್ರ ನಿರಂತರ ಹಾಜರಾತಿಯ ಗುರಿ ಸಾಧಿಸಿದಂತಾಗುತ್ತದೆ.

## 3. ಅಪೇಕ್ಷಿತ ಗುಣಾತ್ಮಕ ಕಲಿಕೆ :

- ❖ ಒಂದು ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿ ಗಳಿಸಲೇಬೇಕೆಂದು ಗುರುತಿಸಿರುವ ವಿಷಯವಾರು ಸಾಮರ್ಥ್ಯಾಧಾರಿತ ಮೌಲ್ಯಮಾಪನ.
- ❖ ಮೌಲ್ಯಮಾಪನಕ್ಕೆ ಒಳಪಡುವ ವಿಷಯಗಳು – ಭಾಷೆ ಮತ್ತು ಗಣಿತ
- ❖ 2, 3, 4 ಮತ್ತು 5ನೇ ತರಗತಿಯ ವಿದ್ಯಾರ್ಥಿಗಳಿಗೆ ಕ್ರಮವಾಗಿ 1, 2, 3, 4ನೇ ತರಗತಿಯ ಸಾಮರ್ಥ್ಯಗಳಿಕೆಯ ಬಗ್ಗೆ ಮೌಲ್ಯಮಾಪನ.

**ಶ್ರೇಣಿಗಳಗೆ ಅಳತೆಗೋಲು**

| | |
|---|---|
| ಪ್ರಥಮ(ಎ)ಶ್ರೇಣಿ : ದಾಖಲಾತಿ 100% ಹಾಜರಾತಿ 90% | 80% ಮಕ್ಕಳಲ್ಲಿ 90% ಕಲಿಕೆ ಬಹುಮಾನದ ಮೊತ್ತ 20,000/– ರೂಗಳು |
| ದ್ವಿತೀಯ(ಬಿ)ಶ್ರೇಣಿ : ದಾಖಲಾತಿ 100% ಹಾಜರಾತಿ 90% | 70% ಮಕ್ಕಳಲ್ಲಿ 90% ಕಲಿಕೆ ಬಹುಮಾನದ ಮೊತ್ತ 10,000/– ರೂಗಳು |
| ತೃತೀಯ(ಎ)ಶ್ರೇಣಿ : ದಾಖಲಾತಿ 100% ಹಾಜರಾತಿ 90% | 60% ಮಕ್ಕಳಲ್ಲಿ 90% ಕಲಿಕೆ ಬಹುಮಾನದ ಮೊತ್ತ 5,000/– ರೂಗಳು |

**ಪ್ರಶ್ನೆ ಪತ್ರಿಕೆಯ ಸಿದ್ಧತೆ :**

ವಿಷಯ : ಭಾಷೆ ಮತ್ತು ಗಣಿತ

ತರಗತಿ : 1, 2, 3 ಮತ್ತು 4

- ❖ ಸಾಮರ್ಥ್ಯಾಧಾರಿತ ಮೌಲ್ಯಮಾಪನ
- ❖ ಅಲ್ಪ ಪ್ರಮಾಣದಲ್ಲಿ ಪ್ರಚಲಿತ ಪಠ್ಯಪುಸ್ತಕಗಳ ಬಳಕೆ
- ❖ ಮೌಖಿಕ ಮತ್ತು ಲಿಖಿತ ಕ್ರಮದ ಅಳವಡಿಕೆ
- ❖ ಸಾಧನೆಯನ್ನು ಗಳಿಸಿದೆ (√), ಗಳಿಸಿಲ್ಲ (X) ಎಂಬುದನ್ನು ಸಂಕೇತದಿಂದ ಗುರುತಿಸಲು ಅವಕಾಶ ನೀಡಿದೆ.

**ಸಾಮರ್ಥ್ಯಾಧಾರಿತ ಮೌಲ್ಯಮಾಪನ :**

- ❖ ಒಂದು ಅವಧಿಯಲ್ಲಿ ಎಲ್ಲ ಸಾಮರ್ಥ್ಯಗಳನ್ನು ಮೌಲ್ಯಮಾಪನಕ್ಕೆ ಅಳವಡಿಸುವ ಬದಲಿಗೆ, ಆಯ್ದ ಕೆಲವು ಸಾಮಾರ್ಥ್ಯಗಳನ್ನು ಗುರುತಿಸಿ ಮೌಲ್ಯಮಾಪನ ಮಾಡುವುದು.
- ❖ ಒಂದಕ್ಕಿಂತ ಹೆಚ್ಚು ಸಾಮರ್ಥ್ಯಗಳನ್ನು ಅಳೆಯಲು ಸಹಕಾರಿಯಾಗುವಂತೆ ಸಾಮರ್ಥ್ಯಗಳ ಗುಚ್ಚವನ್ನು ಗುರುತಿಸಿ ಮೌಲ್ಯಮಾಪನಕ್ಕೆ ಅಳವಡಿಸುವುದು.
- ❖ ಪ್ರತಿ ಮಗುವಿನ ಕಲಿಕಾ ದೋಷವನ್ನು ಗುರುತಿಸಲು ಈ ಮೌಲ್ಯಮಾಪನ ಸಹಕಾರಿಯಾಗಬೇಕು.

**ಕಾರ್ಯಕ್ರಮದ ವಿಸ್ತರಣೆ :**

- ❖ ಕರ್ನಾಟಕ ರಾಜ್ಯದ ಎಲ್ಲ ಮಾಧ್ಯಮಗಳ ಸರ್ಕಾರಿ ಶಾಲೆಗಳಿಗೆ ವಿಸ್ತರಿಸುವುದು.
- ❖ ಪ್ರಸ್ತುತ ನಡೆಯುತ್ತಿರುವ ಶಾಲಾ ತಪಾಸಣೆಯ ಜೊತೆಗೆ ಕಲಿಕಾ ಖಾತ್ರಿ ಅಂಶಗಳನ್ನು ಸೇರಿಸುವುದು.
- ❖ ತಪಸಣಾ ಕಾರ್ಯವನ್ನು ತಂಡದಲ್ಲೇ ನಿರ್ವಹಿಸುವುದು.

**ಜವಾಬ್ದಾರಿಗಳು :**

1. ಮುಖ್ಯ ಶಿಕ್ಷಕರು / ಎಸ್.ಡಿ.ಎಂ.ಸಿ. ಸಭೆಯಲ್ಲಿ ಕಲಿಕಾ ಖಾತ್ರಿ ಕಾರ್ಯಕ್ರಮವನ್ನು ಪರಿಚಯಿಸುವುದು. ಪ್ರಸಕ್ತ ಸಾಲಿಗೆ ಸ್ವಪ್ರೇರಣೆಯಿಂದ ಮುಂದೆ ಬರುವ 50ಕ್ಕು ಹೆಚ್ಚು ಶಾಲೆಗಳನ್ನು ಗುರುತಿಸಿ ನೊಂದಾಯಿಸಿಕೊಳ್ಳುವುದು.
2. ಉಳಿದ ಶಾಲೆಗಳನ್ನು ವರ್ಷಕ್ಕೆ 50 ಕ್ಕಿಂತ ಕಡಿಮೆಯಿಲ್ಲದಂತೆ ಮೌಲ್ಯಮಾಪನಕ್ಕೆ ಒಳಪಡಿಸುವುದು.
3. ಸಾಮರ್ಥ್ಯಾಧಾರಿತ ಮೌಲ್ಯಮಾಪನಕ್ಕೆ ಪ್ರಶ್ನೆ ಪತ್ರಿಕೆಗಳ ಸಿದ್ದತೆ.
4. ಕ್ರೋಢೀಕರಣ ನಮೂನೆಯ ಸಿದ್ದತೆ.
5. ಮೌಲ್ಯಮಾಪನ ಕಾರ್ಯಕ್ಕೆ ಸಂಪನ್ಮೂಲ ತಂಡಗಳ ರಚನೆ – ಬಿ.ಇ.ಓ. : 1, ಬಿ.ಆರ್.ಸಿ : 1 ಪ್ರೌಢಶಾಲಾ ಮು ಶಿ : 1, ಡಯಟ್ ಉಪನ್ಯಾಸಕರು ತಂಡದ ಮುಖ್ಯಸ್ಥರಾಗಿರಬೇಕು. 3 ರಿಂದ 4 ಸದಸ್ಯರು ಬಿ ಆರ್ ಪಿ / ಸಿ ಆರ್ ಪಿ / ಶಿಕ್ಷಣ ಸಂಯೋಜಕರು / ಅನುಭವಿ ಶಿಕ್ಷಕರು.
6. ಅಧಿಕಾರಿಗಳು ಮತ್ತು ಸಂಪನ್ಮೂಲ ತಂಡಗಳಿಗೆ ತರಬೇತಿ.
7. ನೊಂದಾಯಿತ ಶಾಲೆಗಳಿಗೆ ಮೌಲ್ಯಮಾಪನ ದಿನಾಂಕವನ್ನು ಮುಂಚಿತವಾಗಿ ತಿಳಿಸುವುದು.
8. ನೊಂದಾಯಿತ ಶಾಲೆಗಳಲ್ಲಿ ಮೊದಲ ಸುತ್ತಿನ ಮೌಲ್ಯಮಾಪನ ಪ್ರಾರಂಭಿಸುವುದು.
9. ಮಾಹಿತಿ ಗಣಕೀಕರಣಕ್ಕೆ ತಂತ್ರಾಂಶದ ಸಿದ್ದತೆ.
10. ಮೌಲ್ಯಮಾಪನ ಮಾಹಿತಿಯ ಗಣಕೀಕರಣ.
11. ಮಾಹಿತಿಗಳ ವಿಶ್ಲೇಷಣೆ ಮತ್ತು ಶಾಲೆಗಳೊಡನೆ ಹಂಚಿಕೆ.
12. ಮೊದಲ ಸುತ್ತಿನ ಮೌಲ್ಯಮಾಪನದಲ್ಲಿ ಎ, ಬಿ, ಸಿ, ಶ್ರೇಣಿಗಳಲ್ಲಿ ಗಳಿಸಿದ ಶಾಲೆಗಳನ್ನು ಸ್ವತಂತ್ರ ಮೌಲ್ಯಮಾಪನ ತಂಡದಿಂದ ಮೌಲ್ಯಮಾಪನಕ್ಕೆ ಒಳಪಡಿಸುವುದು.
13. ಎರಡನೇ ಸುತ್ತಿನ ಮೌಲ್ಯಮಾಪನದ ಗಣಕೀಕರಣ, ವಿಶ್ಲೇಷಣೆ ಮತ್ತು ಮಾಹಿತಿಯ ಹಂಚಿಕೆ.
14. ಎರಡನೇ ಸುತ್ತಿನ ಮೌಲ್ಯಮಾಪನದಲ್ಲಿ ಎ, ಬಿ, ಸಿ, ಶ್ರೇಣಿಗಳನ್ನು ಗಳಿಸಿದ ಶಾಲೆಗಳಿಗೆ ಪ್ರಶಸ್ತಿ ನೀಡಿ ಗೌರವಿಸುವುದು.
15. ವಿಶ್ಲೇಷಣೆ ಮಾಹಿತಿಯ ಆಧಾರದಲ್ಲಿ ಕಲಿಕಾ ದೋಷ ನಿವಾರಣೆಗಾಗಿ ಡಯಟ್ / ಬಿಆರ್‌ಸಿ ಮೂಲಕ ಶಿಕ್ಷಕರಿಗೆ ತರಬೇತಿಗಾಗಿ ಸಿದ್ದತೆ.

**ಶಾಲೆಗಳು ಲಗತ್ತಿಸಬೇಕಾದ ದಾಖಲೆಗಳು**

1. ಕಲಿಕಾ ಖಾತ್ರಿ ಯೋಜನೆಗೆ ನೋಂದಣಿಗಾಗಿ ಅರ್ಜಿ.
2. ಮಕ್ಕಳ ಗಣತಿ ನಮೂನೆ–3 ರ ಪ್ರತಿ.
3. ಮಕ್ಕಳ ಗಣತಿ ಆಧಾರಿತ ಶಾಲೆ ಬಿಟ್ಟ / ಶಾಲೆಗೆ ದಾಖಲಾಗದ (ಸೇರಿರದ) ಮಕ್ಕಳ ವಿವರದ ಪಟ್ಟಿ.
4. ಶಾಲಾ ವಯಸ್ಸಿನ ಮಕ್ಕಳ ಮಾಹಿತಿ.
5. ಸಿ.ಪಿ.ಇ. ಕ್ರೋಢೀಕರಣ.
6. ದಾಖಲಾತಿ ಕ್ರೋಢೀಕರಣ ವಿವರ – ಸಿ.ಪಿ.ಇ. / ಸ್ವ ಇಚ್ಛೆ / ಟಿ.ಸಿ. / ಮರುದಾಖಲಾತಿ / ವಿಶೇಷ ದಾಖಲಾತಿ / ಚಿಣ್ಣರ ಅಂಗಳ.
7. ಫಲಿತಾಂಶ ಕ್ರೋಢೀಕರಣ – ಘೋಷ್ವಾರೆ.
8. ತರಗತಿವಾರು (1 ರಿಂದ 4ನೇ ತರಗತಿ) ವಿದ್ಯಾರ್ಥಿಗಳ ಭಾಷಾ ಹಾಗೂ ಗಣಿತ ವಿಷಯ ಸಾಮರ್ಥ್ಯ ಗಳಿಕೆಯ ವಸ್ತು ಸ್ಥಿತಿ ಅಧ್ಯಯನ ಕ್ರೋಢೀಕರಣ ಮಾಹಿತಿಗಳು – ಮೌಖಿಕ ಹಾಗೂ ಲಿಖಿತ.
9. ಶಾಲೆಗಳ ಅಗತ್ಯಗಳ ಪಟ್ಟಿ – ಭೌತಿಕ ಮತ್ತು ಶೈಕ್ಷಣಿಕ.
10. ಶಾಲೆಯ ಹೊರನೋಟದ ಚಿತ್ರ.

This document was created with Win2PDF available at http://www.daneprairie.com.
The unregistered version of Win2PDF is for evaluation or non-commercial use only.